## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು: | ಶ್ರೀ ಎಸ್. ರವಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1563 |
| ಉತ್ತರಿಸ ಬೇಕಾದ ದಿನಾಂಕ: | 18.03.2020 |
| ಉತ್ತರಿಸುವ ಸಚಿವರು | ವಿ. ಸೋಮಣ್ಣ, ವಸತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ವಸತಿ ಸೌಲಭ್ಯಗಳ ಯೋಜನೆ ಅಡಿಯಲ್ಲಿ, ಜನವರಿ-2020ರ ಅಂತ್ಯಕ್ಕೆ ರಾಜ್ಯದಲ್ಲಿ ಬೇರೆ ಬೇರೆ ಹಂತಗಳಲ್ಲಿ ಪ್ರೋತ್ಸಾಹಧನ ಪಾವತಿಯಾಗದ ಕಾರಣ ಆಯ್ಕೆಯಾಗಿ ಪೂರ್ಣಗೊಳಿಸಲಾಗದ ಹಾಗೂ ಪೂರ್ಣಗೊಳಿಸಿರುವ ಬೇರೆ ಬೇರೆ ಹಂತಗಳಲ್ಲಿ ಪೂರ್ಣಗೊಳ್ಳದೇ ಬಾಕಿ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು; | ರಾಜ್ಯಾದ್ಯಂತ ವಿವಿಧ ವಸತಿ ಯೋಜನೆಯಡಿ ವಿವಿಧ ಹಂತಗಳಲ್ಲಿರುವ ಪ್ರಗತಿಯಲ್ಲಿರುವ ಒಟ್ಟು 2.23 ಲಕ್ಷ ಮನೆಗಳಲ್ಲಿ ಸಹಾಯಧನವನ್ನು ಪಾವತಿಸುವುದು ಬಾಕಿ ಇರುತ್ತದೆ. ಈ ಮನೆಗಳನ್ನುವಿಜಿಲ್ ಆಪ್ ಮೂಲಕ ಜಿ.ಪಿ.ಎಸ್.ಗೆ ಅಳವಡಿಸಲಾಗುತ್ತಿದ್ದು, ಅದರಲ್ಲಿ ಫೆಬ್ರುವರಿ-2020 ಅಂತ್ಯಕ್ಕೆ 39,773 ಮನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಇನ್ನೂ 1.83 ಲಕ್ಷ ಮನೆಗಳು ಆಯ್ಕೆಯಾಗಿ ಪೂರ್ಣಗೊಳಿಸಲಾದ ಹಾಗೂ ಬೇರೆಬೇರೆ ಹಂತಗಳಲ್ಲಿ ಪೂರ್ಣಗೊಳ್ಳದೇ ಬಾಕಿ ಉಳಿರುತ್ತದೆ. |
| (ಆ) | ತಾಂತ್ರಿಕ ದೋಷಗಳನ್ನು ಹೊರತುಪಡಿಸಿ, ಬೇರೆ ಬೇರೆ ಹಂತಗಳ ಪ್ರಗತಿಗೆ ಹಣ ಪಾವತಿಸಲು ಬಾಕಿ ಉಳಿದಿರುವ ಒಟ್ಟು ಮೊತ್ತವೆಷ್ಟು; | ವಿವಿಧ ವಸತಿ ಯೋಜನೆಯಡಿ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವ ಮನೆಗಳಿಗೆ ಫೆಬ್ರುವರಿ-2020 ಅಂತ್ಯದ ವರೆಗೂ ಒಟ್ಟು ಅನುದಾನ ರೂ.845.27 ಕೋಟಿಗಳನ್ನು ಪಾವತಿಸಲು ಬಾಕಿ ಇರುತ್ತದೆ. |
| (ಇ) | ಆಯ್ಕೆಗೊಂಡ ಫಲಾನುಭವಿಯ ಪೂರ್ವಭಾವಿ ನಿರ್ದೇಶನದ ಕೋ-ಆರ್ಡಿನೇಟ್ಸ್ ಪ್ರಗತಿ ವರದಿ ಮತ್ತು ಫೋಟೋ ಪ್ರತಿಗಳನ್ನು ತಂತ್ರಾಂಶದಲ್ಲಿ ಇಂದೀಕರಿಸಿದ್ದಾಗ್ಯೂ ಫಲಾನುಭವಿಗಳಿಗೆ ಹಣ ನಿಗಧಿತ ಅವಧಿಯಲ್ಲಿ ಪಾವತಿಸದಿರಲು ಕಾರಣಗಳೇನು? (ವರದಿ ನೀಡುವುದು) | ಅಗಸ್ಟ-2019 ಅಂತ್ಯದವರೆಗೂ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗೆ ಅನುಗುಣಾಗಿ ಅನುದಾನ ಬಿಡುಗಡೆ ಮಾಡಲಾಗಿದೆ<br><br>ಆದರೆ, ವಸತಿ ಯೋಜನೆಯಡಿ ಅನುದಾನ ದುರ್ಬಳಕೆ ತಡೆ ಹಿಡಿಯುವ ಉದ್ದೇಶದಿಂದ ದಿನಾಂಕ:16-11-2019ರ ಸರ್ಕಾರಿ ಆದೇಶದನ್ವಯ ಈಗಾಗಲೇ ಪ್ರಗತಿಯಲ್ಲಿರುವ ಹಾಗೂ ಅನುದಾನಕ್ಕೆ ಬಾಕಿ ಇರುವ ಮನೆಗಳನ್ನು ಮತ್ತೊಮ್ಮೆ Geo ಆಧಾರಿತ ವಿಜಿಲ್ ಆಫ್ ಮೂಲಕ ಪರಿಶೀಲಿಸಲು |

| | | |
|---|---|---|
| | | ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ.<br>ಅದರಂತೆ ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡಿರುವ 2.23 ಲಕ್ಷ ಮನೆಗಳನ್ನು ವಿಜಿಲ್ ಆಫ್ ಗೆ ಅಳವಡಿಸಲಾಗಿದ್ದು, ಅದರಲ್ಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿದ 39733 ಮನೆಗಳು ಅರ್ಹವಿದ್ದು, ಈ ಮನೆಗಳಿಗೆ ಫೆಬ್ರುವರಿ-2020 ಅಂತ್ಯಕ್ಕೆ ಒಟ್ಟು 183.72 ಕೋಟಿ ಅನುದಾನ ಫಲಾನುಭವಿಗಳ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗಿದೆ. ಇನ್ನೂಳಿದ ಫಲಾನುಭವಿಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತವಾಗಿ ಅನುದಾನ ಬಿಡುಗಡೆ ಮಾಡಲಾಗುವುದು. |

ವ ಇ 119 ಹೆಚ್‌ಎಂ 2020

(ವಿ.ಸೋಮಣ್ಣ)
ವಸತಿ ಸಚಿವರು